## ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ

ಸಿ.ಸಿ. ನಂಃ 632/2022

ಸಿ.ಡಬ್ಲ್ಯೂಃ 04
ಪಿ.ಡಬ್ಲ್ಯೂಃ 04

ಸಾಕ್ಷಿದಾರರ ಹೆಸರುಃ - ಸುಬದ್ರ ಬಿಮಸಿಂಗ ಪೂಜಾರ

ವಯಸ್ಸು - 50 ವರ್ಷ

ಉದ್ಯೋಗ - ಮನೆ ಕೆಲಸ

ವಾಸಸ್ಥಳ - ನೆಲ್ಲಿ ಹರವಿ

ದಿನಾಂಕಃ26-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಈ ಪ್ರಕರಣದ ಬಗ್ಗೆ ನನಗೆ ಎನೂ ಗೊತ್ತಿರುವುದಿಲ್ಲ.ಸುಮಾರು ಒಂದುವರೆ ವರ್ಷ ಹಿಂದೆ ಮಿನಾಕ್ಷಿ ಮೃತಳಾಗಿದ್ದು ನಾನು ಹುಬ್ಬಳಿಗೆ ದವಾಖಾನೆಗೆ ಹೋದಾಗ ನನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿ ಪಡೆದಿರುತ್ತಾರೆ.ಈಗ ಸಾಕ್ಷಿಗೆ ನಿಪಿ-9 ನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು.ನಿಪಿ-3 ನ್ನು ನಾನು ನೋಡಿ ಗುರುತಿಸಿರುತ್ತೇನೆ. ನಿಪಿ-9 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಸಹಿ ಮಾಡಲು ಹೇಳಿದರು ನಾನು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿ 24-11-2021 ರಂದು ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆ ವರೆಗೆ ಮೃತಳಾದ ಮಿನಾಕ್ಷಿ ಅವರ ಶವ ಪಂಚನಾಮೆಯನ್ನು ನನ್ನ , ಚಾಸಾ-2 ಮತ್ತು 4 ರವರ ಸಮಕ್ಷಮದಲ್ಲಿ ಮಾಡಿರುತ್ತಾರೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ </u>ಶ್ರೀ ಸಿ ಎಮ್ ಎಚ್  ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 632/2022

ಸಿ.ಡಬ್ಲ್ಯೂಃ 02
ಪಿ.ಡಬ್ಲ್ಯೂಃ 03

ಸಾಕ್ಷಿದಾರರ ಹೆಸರುಃ - ಸುರೇಶ ರಾಮಚಂದ್ರ ರಾಯಕರ್

ವಯಸ್ಸು - 57 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಬಮ್ಮಿಗಟ್ಟಿ

ದಿನಾಂಕಃ26-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಈ ಪ್ರಕರಣದ ಬಗ್ಗೆ ನನಗೆ ಎನೂ ಗೊತ್ತಿರುವುದಿಲ್ಲ.ನಾನು ಹುಬ್ಬಳಿಗೆ ದವಾಖಾನೆಗೆ ಹೋದಾಗ ನನ್ನನ್ನು ನಿಲ್ಲಿಸಿ ಒಂದು ಬಾವಚಿತ್ರವನ್ನು ತೆಗೆದಿರುತ್ತಾರೆ. ನಿಪಿ-3 ನಾನು ನೋಡಿ ಗುರುತಿಸಿರುತ್ತೇನೆ. ಈಗ ಸಾಕ್ಷಿಗೆ ಶವ ತನಿಖೆ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಿಪಿ-9 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನಗೆ ಸಹಿ ಮಾಡಲು ಹೇಳಿದರು ನಾನು ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿ 24-11-2021 ರಂದು ಬೆಳಿಗ್ಗೆ 9.00 ಗಂಟೆಯಿಂದ 10.00 ಗಂಟೆ ವರೆಗೆ ಮೃತಳಾದ ಮಿನಾಕ್ಷಿ ಅವರ ಶವ ಪಂಚನಾಮೆಯನ್ನು ನನ್ನ , ಚಾಸಾ-3 ಮತ್ತು 4 ರವರ ಸಮಕ್ಷಮದಲ್ಲಿ ಮಾಡಿರುತ್ತಾರೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲುಃ </u>ಶ್ರೀ ಸಿ ಎಮ್ ಎಚ್ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 632/2022

ಸಿ.ಡಬ್ಲ್ಯೂಃ 05
ಪಿ.ಡಬ್ಲ್ಯೂಃ 02

ಸಾಕ್ಷಿದಾರರ ಹೆಸರುಃ - ಅಬ್ದುಲಗನಿ ಹುಸೇನಸಾಬ ಗೌಳಿ

ವಯಸ್ಸು - 48 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಮುಳಕೇರಿ

ದಿನಾಂಕಃ26-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಈ ಪ್ರಕರಣದ ಬಗ್ಗೆ ನನಗೆ ಎನೂ ಗೊತ್ತಿರುವುದಿಲ್ಲ. ಸುಮಾರು 2-3 ವರ್ಷಗಳ ಹಿಂದೆ ಬಸವನಕಟ್ಟಿಯ ದಾರಿಯಲ್ಲಿ ನನ್ನ ಹೊಲಕ್ಕೆ ಹೋಗುತ್ತಿದ್ದಾಗ ಅಲ್ಲಿಗೆ ಬಂದು ಪೋಲಿಸರು ನನ್ನ ಸಹಿಯನ್ನು ಪಡೆದಿರುತ್ತಾರೆ ಮತ್ತು ಬಾವಚಿತ್ರವನ್ನು ತೆಗೆದಿರುತ್ತಾರೆ. ಈಗ ಸಾಕ್ಷಿಗೆ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಘಟನಾ ಸ್ಥಳದ ಪಂಚನಾಮೆಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಎರಡು ಬಾವಚಿತ್ರಗಳನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಬಾವಚಿತ್ರಗಳನ್ನು ನಿಪಿ-7 ಮತ್ತು 8 ಎಂದು ಗುರುತಿಸಲಾಯಿತು. ಸದರಿ ಬಾವಚಿತ್ರಗಳನ್ನು ರಸ್ತೆಯಲ್ಲಿ ತೆಗೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ದಿ 24-11-2021 ರಂದು 10.30 ರಿಂದ 11.30 ವರೆಗೆ ನನ್ನ ಮತ್ತು ಚಾಸಾ-6 ರವರ ಸಮಕ್ಷಮದಲ್ಲಿ ಘಟನಾ ಸ್ಥಳದ ಪಂಚನಾಮೆಯನ್ನು ಜರುಗಿಸಿ ನಿಪಿ-7 ಮತ್ತು 8 ರಂತೆ ಬಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಸಿ ಎಮ್ ಎಚ್ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 632/2022

ಸಿ.ಡಬ್ಲ್ಯೂಃ 01
ಪಿ.ಡಬ್ಲ್ಯೂಃ 01

ಸಾಕ್ಷಿದಾರರ ಹೆಸರುಃ - ಸಂತೋಷಸಿಂಗ ನಾತುರಾಮಸಿಂಗ್ ರಾಜಪೂತ್

ವಯಸ್ಸು - 33 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ಬೊಮ್ಮನಹಳ್ಳಿ

ದಿನಾಂಕಃ26-05-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಮ್ಮ ಅತ್ತೆಯವರಿಗೆ ಬಿ ಪಿ ಹೆಚ್ಚಾಗಿ ಮುರ್ಚೆ ಹೋಗಿ ಬಿದ್ದಿ ಸತ್ತಿರುತ್ತಾರೆ.ಈ ವಿಷಯವನ್ನು ಆರೋಪಿ ಬಾಲಾಜಿಸಿಂಗ ಅವರು ಪೋನ ಮಾಡಿ ಹೇಳಿದರು .ನಾನು ದವಾಖಾನೆಗೆ ಹೋದಾಗ ಪೋಲಿಸರು ಅಲ್ಲಿಗೆ ಬಂದು ಕೆಲವೊಂದು ದಾಖಲೆಗಳಲ್ಲಿ ನನ್ನ ಸಹಿ ಪಡೆದರು.ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕಿಮ್ಸ ಆಸ್ಪತ್ರೆಯಲ್ಲಿ ಶವ ಹಸ್ತಾಂತರ ಮಾಡುವಾಗ ನನ್ನ ಸಹಿಯನ್ನು ಪಡೆದಿರುತ್ತಾರೆ. ಈಗ ಸಾಕ್ಷಿಗೆ ಪಾವತಿ ಬೇಸ್ಮಿಯನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಾವತಿ ಬೇಸ್ಮಿಯನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಬಾವಚಿತ್ರಗಳನ್ನು ನೋಡಿ ಗುರುತಿಸಿರುತ್ತೇನೆ. ಸದರಿ ಬಾವಚಿತ್ರಗಳನ್ನು ನಿಪಿ-3 ರಿಂದ 5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿ.23-11-2021 ರಂದು ಮುಂಜಾನೆ ಬೆಳಿಗೆ 11.30 ಗಂಟೆ ಸಮಾರಿಗೆ ಆಪಾದಿತನು ಮೋಟಾರ ಸೈಕಲ ನಂಬರ ಕೆ ಎ 25-ಎಚ ಟಿ 4260 ಮುಂಡಗೋಡ ಕಡೆಯಿಂದ ಬಂಕಾಪುರ ಕಡೆಗೆ ಜೋರಾಗಿ ವ ನಿರ್ಲಕ್ಷತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ನಡೆಸಿಕೊಂಡು ಬಂದು ಬಸವನಕಟ್ಟಿ ಗ್ರಾಮದ ಬಸ ಸ್ಟಾಪ ಸಮೀಪ ರಸ್ತೆ ಮೇಲೆ ರೋಡ ಹಂಪ್ಸ ಮೇಲೆ ಗಾಡಿಯನ್ನು ಜೋರಾಗಿ ನಡೆಸಿದ್ದರಿಂದ ತನ್ನ ಮೋಟಾರ ಸೈಕಲ ಹಿಂಬದಿಯ ಸವಾರನಾಗಿ ಮಿನಾಕ್ಷಿಬಾಯಿ ಕೋಂ ಪರಶುರಾಮಸಿಂಗ ಕಿತ್ತೂರು ಸಾಃ ಬಮ್ಮಿಗಟ್ಟಿ ಕಲಘಟಗಿ ತಾಲುಕ ಇವರು ಪುಟಿದು ಕೆಳಗೆ ಬಿದ್ದಿದ್ದು ತಲೆಗೆ ಬಲವಾದ ಒಳಪೆಟ್ಟಾಗಿರುತ್ತದೆ. ಈ ರೀತಿಯಲ್ಲಿ ನಿಪಿ-1 ರಂತೆ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿ.23-11-2021 ರಂದು ನನ್ನ ಅತ್ತೆ ಮಿನಾಕ್ಷಿ ಪರಶುರಾಮಸಿಂಗ ಕಿತ್ತೂರು ಇವರು ರಸ್ತೆ ಅಪಘಾತದಲ್ಲಿ ಗಾಯಗೊಂಡು ಉಪಚಾರಕ್ಕಾಗಿ ಹುಬ್ಬಳಿ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಿದಾಗ ಉಪಚಾರ ಫಲಿಸದೆ ಸಾಯಂಕಾಲ 5.50 ಗಂಟೆಗೆ ಮೃತ ಪಟ್ಟಿದ್ದು ಮತ್ತು ದಿ 23-11-2021 ರಂದು ಶವ ಪಂಚನಾಮೆ ಪಿ ಎಮ್ ಪರೀಕ್ಷೆ ಮುಗಿದ ನಂತರ ಮುಂದಿನ ಕ್ರಮಕ್ಕೆ ನನ್ನ ತಾಬಾಕ್ಕೆ ಕೊಟ್ಟರು ಎಂದರೆ ಸರಿ.

ಪಾಟೀ ಸವಾಲುಃ ಶ್ರೀ ಸಿ ಎಮ್ ಎಚ್ ಆರೋಪಿ ಪರ ವಕೀಲರಿಂದ

ಮೃತ ವ್ಯಕ್ತಿಯು ನನ್ನ ಹೆಂಡತಿಯ ತಾಯಿ ಇರುತ್ತಾರೆ .ನನ್ನ ಅತ್ತೆಗೆ ಮೊದಲಿನಿಂದಲೂ ಬಿ ಪಿ ತೊಂದರೆ ಇತ್ತು ಎಂದರೆ ಸರಿ. ಅವರಿಗೆ ಬಿ ಪಿ ಹೆಚ್ಚು ಕಡಿಮೆ ಆಗಿದ್ದರಿಂದ ಅವರು ಆವಾಗಾವಾಗ ಮುರ್ಚೆ ಹೋಗುತ್ತಿದ್ದರು ಎಂದರೆ ಸರಿ. ಆರೋಪಿಯು ಚಲಾಯಿಸುತ್ತಿದ್ದ ಗಾಡಿಯ ಮೇಲೆ ಮೃತಳಾದ ನನ್ನ ಅತ್ತೆಯು ಕುತಕೊಂಡಿದ್ದು ಆಕೆಗೆ ಬಿ ಪಿ ಹೆಚ್ಚಿದ್ದರಿಂದ ಮುರ್ಚೆ ಹೋಗಿ ಬೈಕ ಇಂದ ಬಿದ್ದಿರುತ್ತಾಳೆ ಎಂದರೆ ಸರಿ ಸಾಕ್ಷಿಯು ಮುಂದುವರೆದು ಆರೋಪಿಯು ನನಗೆ ಆ ರೀತಿ ತಿಳಿಸಿರುತ್ತಾರೆ

ಎಂದು ನುಡಿಯುತ್ತಾರೆ. ಈ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ನನ್ನ ಅತ್ತೆಯು ಮುರ್ಚೆ ಹೋಗಿ ಬಿದ್ದಿದ್ದರಿಂದ ಅವರ ತಪ್ಪಿನಿಂದ ಸದರಿ ಅಪಘಾತ ಆಗಿರುತ್ತದೆ ಎಂದರೆ ಸರಿ. ನಾನು ಈ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ನಿಪಿ-1 ರಲ್ಲಿ ಎನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದರು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 59/2017

ಸಿ.ಡಬ್ಲ್ಯೂಃ 04
ಪಿ.ಡಬ್ಲ್ಯೂಃ 02

ಸಾಕ್ಷಿದಾರರ ಹೆಸರುಃ - ಚನ್ನಬಸನಗೌಡ ವೀರನಗೌಡ ಪಾಟೀಲ

ವಯಸ್ಸು - 25 ವರ್ಷ

ಉದ್ಯೋಗ - ಚಾಲಕ

ವಾಸಸ್ಥಳ - ನೀರಲಗಿ

ದಿನಾಂಕಃ 09-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ನನ್ನ ಅಕ್ಕ ಮತ್ತು ಚಾಸಾ-5 ನನ್ನ ತಾಯಿ ಇರುತ್ತಾರೆ .ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತಿರುತ್ತಾರೆ . ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಘಟನೆ ಆಗಿರುವುದಿಲ್ಲ. ಪೋಲಸಿರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಮೇಲಿನ ವಿಳಾಸದಲ್ಲಿ ವಾಸವಾಗಿರುತ್ತೇನೆ ಮನೆಯಲ್ಲಿ ನಾನು ನನ್ನ ತಂದೆ ವೀರನಗೌಡ ಹಾಗೂ ತಾಯಿ ಕಲ್ಲವ್ವ ಮತ್ತು ಅಕ್ಕ

...........................................................................................

...........................................................................................

...........................................ಪಡಿಸಿ ಅಕ್ಕ ತಮ್ಮ ಕಡೆಗೆ ಹುಬ್ಬಳ್ಳಿಯಲ್ಲಿ ಪಿರ್ಯಾದಿಯನ್ನು ಕೊಟ್ಟು ಅದೇ.

ಈ ಮೇಲೆ ಓದಿ ಹೇಳಿದ ರೀತಿಯಲ್ಲಿ ನಾನು ಪೋಲಿಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-06 ಎಂದು ಗುರುತಿಸಲಾಯಿತು.

ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಶ್ರೀ ಕೆ ಎಸ್ ಡಿ ಆರೋಪಿ ಪರ ವಕೀಲರು ಪಾಟಿಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )**

**ಓ ಹೆ ಕೆ ಸರಿ ಅದೆ.**

**ಜೆ. ಎಂ. ಎಫ್. ಸಿ., ಶಿಗ್ಗಾಂವ.**

<u>ಸಿವಿಲ್ ಜಡ್ಜ ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ, ಶಿಗ್ಗಾಂವ</u>

ಸಿ.ಸಿ. ನಂಃ 59/2017

ಸಿ.ಡಬ್ಲ್ಯೂಃ 05
ಪಿ.ಡಬ್ಲ್ಯೂಃ 03

ಸಾಕ್ಷಿದಾರರ ಹೆಸರುಃ - ಕಲ್ಲವ್ವ ವೀರನಗೌಡ ಪಾಟೀಲ

ವಯಸ್ಸು - 65 ವರ್ಷ

ಉದ್ಯೋಗ - ಮನೆಕೆಲಸ

ವಾಸಸ್ಥಳ - ನೀರಲಗಿ

ದಿನಾಂಕಃ 09-09-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ-1 ನನ್ನ ಮಗಳು ಮತ್ತು ಚಾಸಾ-4 ನನ್ನ ಮಗ ಇರುತ್ತಾರೆ.ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತಿರುತ್ತಾರೆ . ನಮ್ಮ ಮತ್ತು ಆರೋಪಿಗಳ ನಡುವೆ ಯಾವುದೇ ಘಟನೆ ಆಗಿರುವುದಿಲ್ಲ. ಪೋಲಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಕರಿಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ನಾನು ಮೇಲಿನ ವಿಳಾಸದಲ್ಲಿ ವಾಸವಾಗಿರುತ್ತೇನೆ ಮನೆಯಲ್ಲಿ ನಾನು ನನ್ನ ಗಂಡ ವೀರನಗೌಡ ಹಾಗೂ ಮಕ್ಕಳಾದ ..........................................................................................
..........................................................................................
..........................................ಹುಬ್ಬಳ್ಳಿಗೆ ಆಸ್ಪತ್ರೆಗೆ ಹೋದರು ಈ ಬಗ್ಗೆ ನನ್ನ

ಮಗಳು ಮಂಜುಳಾ ಇವಳು  ತಮ್ಮ ಕಡೆಗೆ ಹುಬ್ಬಳ್ಳಿಯಲ್ಲಿ ಪಿರ್ಯಾದಿಯನ್ನು ಕೊಟ್ಟಿದ್ದು ಅದೇ.

ಈ ಮೇಲೆ ಓದಿ ಹೇಳಿದ ರೀತಿಯಲ್ಲಿ ನಾನು ಪೋಲಿಸರ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-07 ಎಂದು ಗುರುತಿಸಲಾಯಿತು.

ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಕೆ ಎಸ್ ಡಿ ಆರೋಪಿ ಪರ ವಕೀಲರು ಪಾಟಿಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಅದೆ.

ಜೆ. ಎಂ. ಎಫ್. ಸಿ., ಶಿಗ್ಗಾಂವ.